ದಿಃ 27-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ ಮುಂದುವರೆದ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ** : ಪ್ರತಿವಾದಿಯ ಪರ ಶ್ರೀ ಪಿ ಬಿ ಎ ವಕೀಲರಿಂದ.

ಇಂದು ನಾನು ನ್ಯಾಯಾಲಯಕ್ಕೆ ಎರಡು ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಮಾರ್ಗಸೂಚಿ ಬೆಲೆ ಮಾಹಿತಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ 30 ಮತ್ತು 31 ಎಂದು, ಒಂದು ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ 32 ಎಂದು ಗುರುತಿಸಲಾಯಿತು. ಆದ್ದರಿಂದ ವಾದಿಯ ದಾವೆಯನ್ನು ವಜಾ ಮಾಡಲು ಕೋರುತ್ತೇನೆ.

ಪ್ರತಿವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆ ಇಲ್ಲ ಎಂದು ತಿಳಿಸಿರುತ್ತಾರೆ.

**ಪಾಟೀ ಸವಾಲುಃ** ವಾದಿಯ ಪರ ಶ್ರೀ ಬಿ ಎಸ್ ಎಚ್ ವಕೀಲರಿಂದ.

ನನಗೆ ಈಗ ನನಗೆ 43 ವರ್ಷ ವಯಸ್ಸು. ನಾನು 5 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಈ ದಾವೆಯ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ವಾದಿಯ ತಂದೆ ಯಮನಪ್ಪ ಮತ್ತು ಯಲ್ಲಪ್ಪ ರವರು ಖಾಸಾ ಅಣ್ಣ ತಮ್ಮಂದಿರು. ಯಲ್ಲಪ್ಪನವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ಹವಗಿ ಗ್ರಾಮದ ಬ್ಲಾಕ್ ನಂಬರ 58 ರಲ್ಲಿರುವ 1 ಎಕರೆ 32 ಗುಂಟೆಯನ್ನು ನೋಡಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ಅದರಲ್ಲಿ ನೀರಾವರಿ ಇದ್ದು, ವಾದಿಯರು ಕಬ್ಬು ಬೆಳೆಯುತ್ತಾರೆ. ಬ್ಲಾಕ್ ನಂಬರ 58 ರಲ್ಲಿರುವ 1 ಎಕರೆ 32 ಗುಂಟೆ ಜಮೀನು ವಾದಿಯರಿಗೆ ಹಿರಿಯರಿಂದ ಬಂದಿದೆ ಎಂದರೆ ಸರಿ. ಹವಗಿ ಗ್ರಾಮದ ಮನೆ ಮತ್ತು ಹೊಲಗಳನ್ನು ಯಲ್ಲಪ್ಪ ಮತ್ತು ಯಮನಪ್ಪ ನವರು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ಹವಗಿ ಗ್ರಾಮದ ಮನೆ ಮತ್ತು ಹೊಲಗಳನ್ನು ಬಿಟ್ಟು ಯಲ್ಲಪ್ಪ ಯಡೋಗಾಕ್ಕೆ ಹೋದರು ಎಂದರೆ ಸರಿ. ಯಲ್ಲಪ್ಪನವರು ಕೇವಲ ವ್ಯವಸಾಯ ಮಾಡುತ್ತಿದ್ದರು ಅವರು ನೌಕರಿಯಲ್ಲಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ಅವರು ಹೊಲ ಮಾಡುತ್ತಿದ್ದರು ಎನ್ನುತ್ತಾರೆ. ಯಲ್ಲಪ್ಪ ಮತ್ತು ಯಮನಪ್ಪ ಬೇರೆ ಯಾಗುವ ಮೊದಲು ಹವಗಿ ಗ್ರಾಮದ ಬ್ಲಾಕ್ ನಂಬರ 58

ರಲ್ಲಿರುವ 1 ಎಕರೆ 32 ಗುಂಟೆ ಜಮೀನಿಂದ ಸಾಕಷ್ಟು ಉತ್ಪನ್ನ ಬರುತ್ತಿತ್ತು ಎಂದರೆ ಸರಿ. ಯಲ್ಲಪ್ಪ ಮತ್ತು ಯಮನಪ್ಪ ಬೇರೆ ಯಾಗುವ ಮೊದಲು ಯಲ್ಲಪ್ಪನವರೆ ಮನೆಯ ಹಿರಿತನ ಮಾಡುತ್ತಿದ್ದರು ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ.

ತಿಮ್ಮಾಪುರ ಗ್ರಾಮದಲ್ಲಿ ಸರ್ವೇ ನಂಬರ 19 ರಲ್ಲಿರುವ 4 ಎಕರೆ 11 ಗುಂಟೆ ಕರಾಬು 2 ಗುಂಟೆ ಇದೆ ಎಂದರೆ ಸರಿ. ಆ ಸಂಪೂರ್ಣ ಸ್ವತ್ತಿಗೆ ಒಂದೇ ಬ್ಲಾಕ್ ನಂಬರ ಇದ್ದು, ವಿಭಾಗ ಆಗಿಲ್ಲ ಎಂದರೆ ಸರಿ. ಸದರಿ ಜಮೀನನ್ನು 1948 ರಲ್ಲಿ ಯಲ್ಲಪ್ಪನವರ ಹೆಸರಿನಲ್ಲಿ ಖರೀದಿ ಮಾಡಲಾಯಿತು ಎಂದರೆ ಸರಿಯಲ್ಲ. ಸಾಕ್ಷಿ ಯಮನಪ್ಪನವರ ಹೆಸರಿನಲ್ಲಿ ಖರೀದಿ ಮಾಡಲಾಗಿದೆ ಎನ್ನುತ್ತಾರೆ. ನಂತರ ಯಲ್ಲಪ್ಪನವರ ಹೆಸರಿನಲ್ಲಿ ಖರೀದಿ ಮಾಡಲಾಗಿದೆ ಎನ್ನುತ್ತಾರೆ. ಹವಗಿ ಗ್ರಾಮದ ಸರ್ವೇ ನಂಬರ 58 ರ ಜಮೀನಿನ ಉತ್ಪನ್ನದಿಂದ ಯಲ್ಲಪ್ಪ ಮತ್ತು ಯಮನಪ್ಪನವರು ತಿಮ್ಮಾಪುರ ಗ್ರಾಮದ ಸರ್ವೇ ನಂಬರ 19 ಅನ್ನು ಖರೀದಿಸಿದ್ದಾರೆ ಎಂದರೆ ಸಾಕ್ಷಿ ಯಲ್ಲಪ್ಪನವರು ಮಾತ್ರ ಖರೀದಿ ಮಾಡಿದ್ದಾರೆ ಎನ್ನುತ್ತಾರೆ. ಯಲ್ಲಪ್ಪನವರು ಸದರಿ ಜಮೀನನ್ನು ಖರೀದಿ ಮಾಡಲು ಎಲ್ಲಿಂದ ಹಣ ತಂದರು ಎಂದು ನಿಮಗೆ ಮಾಹಿತಿ ಇದೆ ಎಂದರೆ ಇಲ್ಲ ಎನ್ನುತ್ತಾರೆ. ತಿಮ್ಮಾಪುರ ಗ್ರಾಮ ಠಾಣಾದಲ್ಲಿರುವ ಐದೈದು ಗುಂಟೆ ಮೂರು ಜಾಗವನ್ನು ಯಲ್ಲಪ್ಪನವರ ಹೆಸರಿನಲ್ಲೇ ಖರೀದಿಸಲಾಗಿದೆ ಎಂದರೆ ಸರಿ. ಹವಗಿ ಗ್ರಾಮದ ಸರ್ವೇ ನಂಬರ 58 ರ ಜಮೀನಿನ ಉತ್ಪನ್ನದಿಂದ ತಿಮ್ಮಾಪುರ ಗ್ರಾಮ ಠಾಣಾದಲ್ಲಿರುವ ಐದೈದು ಗುಂಟೆ ಮೂರು ಜಾಗವನ್ನು ಯಲ್ಲಪ್ಪನವರ ಹೆಸರಿನಲ್ಲಿ ಖರೀದಿಸಲಾಗಿದೆ ಎಂದರೆ ಸಾಕ್ಷಿ ಯಡೋಗಾ ಗ್ರಾಮದಲ್ಲಿರುವ ಯಲ್ಲಪ್ಪನವರು ಖರೀದಿಸಿದ್ದಾರೆ ಎನ್ನುತ್ತಾರೆ. ತಿಮ್ಮಾಪುರ ಗ್ರಾಮದ ಸರ್ವೇ ನಂಬರ 19 ಅನ್ನು ದಿನಾಂಕ 05-09-1984 ರಲ್ಲಿ ಪ್ರತಿವಾದಿ 1 ಮತ್ತು 2 ರವರ ಹೆಸರಿನಲ್ಲಿ ಖರೀದಿ ಮಾಡಿದ ಬಗ್ಗೆ ಮಾಹಿತಿ ಇದೆಯೇ ಎಂದರೆ ಸಾಕ್ಷಿ ಆಗ ನಾವು ಸಣ್ಣವರಿದ್ದೇವು ಎನ್ನುತ್ತಾರೆ. ಸದರಿ ಜಮೀನನ್ನು ಖರೀದಿ ಮಾಡಿದ ಬಗ್ಗೆ ವಿಚಾರ ಮಾಡಿದ್ದೀರಾ ಎಂದರೆ ಸಾಕ್ಷಿ ಆಗ ನಾವು ಸಣ್ಣವರಿದ್ದೇವು ನಮ್ಮ ತಂದೆಯವರು ಹವಗಿಯ ನಾಲ್ಕು ಜನ ಹಿರಿಯರು ಮತ್ತು ತಿಮ್ಮಾಪುರ ಗ್ರಾಮದ ನಾಲ್ಕು ಜನ ಹಿರಿಯರು ಕೂಡಿ ಬಾಂಡ್ ಬರೆಸಿಕೊಟ್ಟಿದ್ದಾರೆ ಎನುತ್ತಾರೆ. ಸದರಿ ಬಾಂಡ್ ಗಳು ನಮ್ಮ ಬಳಿ ಇವೆ ಎನ್ನುತ್ತಾರೆ. ಸದರಿ ಖರೀದಿಯ ಬಗ್ಗೆ ನೀವು ವಯಕ್ತಿಕವಾಗಿ ವಿಚಾರ ಮಾಡಿ ತಿಳಿದುಕೊಂಡಿಲ್ಲ ಎಂದರೆ ಸರಿ. ವಾದಿಯ ತಂದೆ ಯಮನಪ್ಪರವರು ಯಾವಾಗ ಮರಣ ಹೊಂದಿದರು ಎಂದರೆ ಸಾಕ್ಷಿ ಮರಣ ಪ್ರಮಾಣ ಪತ್ರ ಹಾಜರುಪಡಿಸಿದ್ದೇನೆ ದಿನಾಂಕ ನೆನಪಿಲ್ಲ

ಎನ್ನುತ್ತಾರೆ. ಯಮನಪ್ಪವರು 1983 ರಲ್ಲಿ ಮರಣ ಹೊಂದಿದರು ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಅವರು ಯಡೋಗಾದಲ್ಲಿ ಮರಣ ಹೊಂದಿದ್ದಾರೆ ಎನ್ನುತ್ತಾರೆ. ಯಮನಪ್ಪ ಯಡೋಗಾ ಗ್ರಾಮದಲ್ಲಿ ತೀರಿಕೊಂಡ ಬಗ್ಗೆ ದಾಖಲೆಗಳು ಇವೆಯೇ ಎಂದರೆ ಸಾಕ್ಷಿ ವಕೀಲರಿಗೆ ಕೊಟ್ಟಿದ್ದೇನೆ ಎನ್ನುತ್ತಾರೆ. ಆ ನಂತರ ವಾದಿ ಮತ್ತು ಯಲ್ಲಪ್ಪನವರು ಸರ್ವೇ ನಂಬರ 19 ಅನ್ನು ಸಾಗುವಳಿ ಮಾಡುತ್ತಾ ಬಂದರು ಎಂದರೆ ಸರಿಯಲ್ಲ. ಸಾಕ್ಷಿ ಯಲ್ಲಪ್ಪ ತಂದೆ ಕಲ್ಲಪ್ಪನವರು ಸಾಗುವಳಿ ಮಾಡುತ್ತಿದ್ದರು ಎನ್ನುತ್ತಾರೆ. ಯಲ್ಲಪ್ಪ ತಂದೆ ಕಲ್ಲಪ್ಪನವರು ಸಾಗುವಳಿ ಮಾಡುತ್ತಿದ್ದರು ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿ ಮತ್ತು ಯಲ್ಲಪ್ಪನವರು ತಿಮ್ಮಾಪುರ ಗ್ರಾಮದಲ್ಲಿರುವ ಮೂರು ನಿವೇಶನಗಳನ್ನು ಅನುಭೋಗ ಮಾಡುತ್ತಾ ಬಂದರು ಎಂದರೆ ಸರಿಯಲ್ಲ. ಯಲ್ಲಪ್ಪನವರು ಮಾತ್ರ ವಹಿವಾಟು ಮಾಡುತ್ತಿದ್ದರು ಎನ್ನುತ್ತಾರೆ. ಯಲ್ಲಪ್ಪನವರು ಮಾತ್ರ ವಹಿವಾಟು ಮಾಡುತ್ತಿದ್ದರು ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

2021 ರಲ್ಲಿ ಖೊಟ್ಟಿ ಖರೀದಿ ಆದ ವಿಷಯ ಗೊತ್ತಾದ ನಂತರ ವಾದಿ ಹಿರಿಯರ ಸಮಕ್ಷಮ ನಿಮಗೆ ಸ್ವತ್ತಿನ ವಿಚಾರವಾಗಿ ಕೇಳಿದರು ಎಂದರೆ ಸರಿಯಲ್ಲ. ಸಾಕ್ಷಿ ನಮಗೆ ಏನು ಕೇಳಿಲ್ಲ ಎನ್ನುತ್ತಾರೆ. ಪ್ರತಿವಾದಿ 1 ಮತ್ತು 2 ರವರು ವಾದಿಗೆ ಗೊತ್ತಾಗದಂತೆ ಅವರ ಸಹಿ ಪಡೆಯದೆ ಖೊಟ್ಟಿ ದಾಖಲೆಗಳನ್ನು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಖರೀದಿಯಾಗು ಮೊದಲು ಸದರಿ ಸ್ವತ್ತಿನ ಕುರಿತು ತಕರಾರು ಇವೆಯೇ ಎಂದು ತಿಳಿದುಕೊಳ್ಳಲು ಪ್ರತಿಕಾ ಪ್ರಕಟಣೆ ತೆಗೆದುಕೊಂಡಿದ್ದಾರಾ ಇಲ್ಲ ಎನ್ನುತ್ತಾರೆ. ಡೈರಿ ಸಂಖ್ಯೆ 360 ಮತ್ತು 361 ಗಳನ್ನು ಕಂದಾಯ ಅಧಿಕಾರಿಗಳೊಂದಿಗೆ ಮಿಲಾಪಿಯಾಗಿ ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಮಾರಾಟ ಮಾಡುವ ಅಡಚಣೆ ಯಲ್ಲಪ್ಪ ಮತ್ತು ಯಮನಪ್ಪ ನವರ ಮಕ್ಕಳಿಗೆ ಇರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆ ಸಮಯದಲ್ಲಿ ಯಲ್ಲಪ್ಪ ಮತ್ತು ವಾದಿಗೆ ಅಡಚಣೆ ಇದ್ದ ಬಗ್ಗೆ ಬ್ಯಾಂಕ್ ಖಾತೆಯ ಬಗ್ಗೆ ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಡೈರಿ ಸಂಖ್ಯೆ 370 ಅನ್ನು ಖೊಟ್ಟಿಯಾಗಿ ಸೃಷ್ಟಿಸಿದ್ದೀರಿ ಎಂದರೆ ಸಾಕ್ಷಿ ಆ ಬಗ್ಗೆ ನೆನಪಿಲ್ಲ ಎನ್ನುತ್ತಾರೆ. ತಿಮ್ಮಾಪುರದಲ್ಲಿರುವ ತಲಾ ಐದು ಗುಂಟೆ ಮೂರು ನಿವೇಶನಗಳ ಬಗ್ಗೆ ಯಾವುದೇ ನೋಂದಾಯಿತ ವ್ಯವಹಾರ ಆಗಿದೆ ಎಂದರೆ ಸರಿಯಲ್ಲ, ನೋಂದಾಣಾಧಿಕಾರಿಯ ಕಚೇರಿಯಲ್ಲಿ ಆಗಿದೆ ಎನ್ನುತ್ತಾರೆ. ಸದರಿ

ನಿವೇಶನಗಳ ನೋಂದಾಯಿತ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಸದರಿ ನಿವೇಶನಗಳನ್ನು ಖೊಟ್ಟಿಯಾಗಿ ದಾಖಲು ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ, ಸಾಕ್ಷಿ ಖರೀದಿಯಾಗಿವೆ ಎನ್ನುತ್ತಾರೆ. ಇವತ್ತಿನವರೆಗೂ ವಾದಿಯೇ ದಾವಾ ಆಸ್ತಿಗಳ ವಹಿವಾಟು ಮಾಡುತ್ತಾರೆ ಎಂದರೆ ಸರಿಯಲ್ಲ. ನಾವೇ ವಹಿವಾಟು ಮಾಡುತ್ತೇವೆ ಎನ್ನುತ್ತಾರೆ. ನಾವು 2021 ರ ಅಗಸ್ಟ್ ತಿಂಗಳ ಮೊದಲ ವಾರದಲ್ಲಿ ಕಬ್ಜೆಗೆ ತೊಂದರೆ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಡಿ 21 ಮತ್ತು 22 ಗಳನ್ನು ದಾವಾ ನಿವೇಶನಗಳಿಗೆ ಸಂಬಂಧಿಸಿದ ಉತಾರಗಳು ಅಲ್ಲ ಎಂದರೆ ಸರಿಯಲ್ಲ. ನೀವು ಹಾಜರುಪಡಿಸಿದ ಭಾವಚಿತ್ರಗಳು ದಾವಾ ನಿವೇಶನಗಳಿಗೆ ಸಂಬಂಧಿಸಿದ ಭಾವಚಿತ್ರಗಳು ಅಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಯಲ್ಲಪ್ಪ ನವರ ನಡುವೆ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ವಾಟಣೆ ಆಗಿಲ್ಲ ಎಂದರೆ ಸರಿಯಲ್ಲ. ವಾದಿಯ ಆಸ್ತಿಗಳು ಬೇರೆಗಳು ಯಲ್ಲಪ್ಪನವರ ಆಸ್ತಿಗಳು ಬೇರೆ ಎನ್ನುತ್ತಾರೆ. ಪ್ರತಿವಾದ ಪತ್ರದಲ್ಲಿ ತೋರಿಸಿರುವ ವಂಶಾವಳಿ ಸರಿಯಾಗಿದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಹಾಜರುಪಡಿಸಿದಿದ್ದೇನೆ ಎನ್ನುತ್ತಾರೆ. ವಂಶಾವಳಿ ಸರಿಯಾಗಿದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸದಿದ್ದರೂ ಸಹ ಹಾಜರುಪಡಿಸಿದ್ದೇನೆ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ವಂಶಾವಳಿಯನ್ನು ಖೊಟ್ಟಿಯಾಗಿ ಸೃಷ್ಟಿಸಿ ಪ್ರತಿವಾದ ಪತ್ರದಲ್ಲಿ ತೋರಿಸಿದ್ದೀರಿ ಎಂದರೆ ಸರಿಯಲ್ಲ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ತಿಮ್ಮಾಪುರ ಗ್ರಾಮದ ನೋಂದಣಿ ಮತ್ತು ಮುದ್ರಾಂಕ ಇಲಾಖೆ ಮಾರ್ಗಸೂಚಿ ಬೆಲೆ ಮಾಹಿತಿ ಪತ್ರಿಕೆ ಎಂದರೆ ಸರಿ ಎಂದು ಒಪ್ಪಿಕೊಂಡಿರುತ್ತಾರೆ. ಸಾಕ್ಷಿ ಒಪ್ಪಿಕೊಂಡ ಮೇರೆಗೆ ಸದರಿ ದಾಖಲೆಗಳನ್ನು **ನಿಪಿ 23** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದು ದಾವಾ ನಿವೇಶನಗಳ ಋಣಭಾರ ರಾಹಿತ್ಯ ಪ್ರಮಾಣ ಪತ್ರ ಎಂದರೆ ಸರಿ ಎಂದು ಒಪ್ಪಿಕೊಂಡಿರುತ್ತಾರೆ. ಸಾಕ್ಷಿ ಒಪ್ಪಿಕೊಂಡ ಮೇರೆಗೆ ಸದರಿ ದಾಖಲೆಗಳನ್ನು **ನಿಪಿ 24** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಎರಡು ಕೈಬರಹ ಪಹಣಿ ಪತ್ರಿಕೆಗಳ ದೃಢಿಕೃತ ನಕಲುಗಳನ್ನು ತೋರಿಸಿ ಅವು ದಾವಾ ನಿವೇಶನಗಳ ಪಹಣಿ ಪತ್ರಿಕೆಗಳು ಎಂದು ಹೇಳಲಾಗಿ, ಸಾಕ್ಷಿ ಒಪ್ಪಿಕೊಂಡ ಮೇರೆಗೆ ಸದರಿ ದಾಖಲೆಗಳನ್ನು **ನಿಪಿ 25 ಮತ್ತು 26** ಎಂದುಗುರುತಿಸಲಾಯಿತು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ದಿನಾಂಕ 02-09-2024 ರಂದು ಕಾರ್ಯದರ್ಶಿ ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿ ಗ್ರಾಮ ಪಂಚಾಯತಿ ಹವಗಿ ರವರು ನೀಡಿದ ಹಿಂಬರಹ ಎಂದರೆ ಸರಿ. ಸಾಕ್ಷಿ ಒಪ್ಪಿಕೊಂಡ ಮೇರೆಗೆ ಸದರಿ ದಾಖಲೆಗಳನ್ನು **ನಿಪಿ 27** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ದಿನಾಂಕ 03-09-2024 ರಂದು ಸಾರ್ವಜನಿಕ ಮಾಹಿತಿ ಅಧಿಕಾರಿ, ತಹಶೀಲ್ದಾರ ಹಳಿಯಾಳ ರವರು ನೀಡಿದ ಹಿಂಬರಹ ಎಂದರೆ ಸರಿ. ಸಾಕ್ಷಿ ಒಪ್ಪಿಕೊಂಡ ಮೇರೆಗೆ ಸದರಿ ದಾಖಲೆಗಳನ್ನು **ನಿಪಿ 28** ಎಂದು ಗುರುತಿಸಲಾಯಿತು.

ದಿನಾಂಕ 06-07-2019 ರಂದು ನಿಮ್ಮ ಹೆಸರಿನಲ್ಲಿ ಆದ ಭಕ್ಷಿಸ್ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಭಕ್ಷಿಸ್ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿ ಮತ್ತು ಅವರ ಕಾಕಾ ಯಲ್ಲಪ್ಪ ನವರ ನಡುವೆ ಯಾವುದೇ ಪ್ರಕರಣಗಳು ಇರಲಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ತಹಶೀಲ್ದಾರ ಕಚೇರಿಯಲ್ಲಿ ಪ್ರಕರಣ ಹೂಡಿದ್ದರು ಅದು ವಜಾಗೊಂಡಿದೆ ಎನ್ನುತ್ತಾರೆ. ವಜಾ ಆದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆ ರೀತಿಯ ಯಾವುದೇ ಪ್ರಕರಣಗಳು ಇಲ್ಲದ ಕಾರಣ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನಿಡಿ 30 ಮತ್ತು 31 2022-2023 ಮತ್ತು 2023-2024 ನೇ ಸಾಲಿನ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಮಾರ್ಗಸೂಚಿ ಬೆಲೆ ಮಾಹಿತಿ ಪತ್ರಿಕೆಗಳು ಎಂದರೆ ಸರಿ. ನಿಡಿ 32 ರ ಪಹಣಿ ಪತ್ರಿಕೆ ದಾವಾ ಆಸ್ತಿಗೆ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸಾಕ್ಷಿ ಸದರಿ ಪಹಣಿ ಪತ್ರಿಕೆ ಗುತ್ತಿಗೇರಿ ಗ್ರಾಮದ್ದು ನಮ್ಮ ಜಮೀನಿಗೆ ಅಂಟಿಕೊಂಡಿದೆ ಎನ್ನುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ನೀಡಿದ್ದೇನೆ, ನನಗೆ ಆ ಬಗ್ಗೆ

ಮಾಹಿತಿ ಇದೆ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ಸುಳ್ಳು ಮಾಹಿತಿ ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1984 ರಲ್ಲಿ ಖರೀದಿಯಾಗುವ ಸಮಯದಲ್ಲಿ ಹಿರಿಯರು ಯಾರು ಯಾರು ಇದ್ದರು ಎಂದರೆ ಸಾಕ್ಷಿ ಬಾಂಡ್ ಪತ್ರದಲ್ಲಿ ಬರೆಯಲಾಗಿದೆ ಎನ್ನುತ್ತಾರೆ. ಮುಂದುವರೆದು ತಿಮ್ಮಾಪುರದ ಲಕ್ಷ್ಮಣ ಪರಶುರಾಮ ದೇವಕಾರಿ ರವರು ಇದ್ದರು ಮತ್ತು ಹವಗಿ ಗ್ರಾಮದವರು ಇದ್ದರು ಎನ್ನುತ್ತಾರೆ. ಆ ವ್ಯವಹಾರ ಎಷ್ಟು ಹಣಕ್ಕೆ ಆಯಿತು ಎಂದು ಮಾಹಿತಿ ಇಲ್ಲ ಎಂದರೆ ಸಾಕ್ಷಿ ಪತ್ರದಲ್ಲಿ ಬರೆಯಲಾಗಿದೆ ನನಗೆ ವಯಕ್ತಿಕ ಮಾಹಿತಿ ಇದೆ ಎನ್ನುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ.)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ

ಪ್ರ.ದ.ನ್ಯಾದಂ., ಹಳಿಯಾಳ.